**ಓ ಎಸ್ ನಂ.76/2018**

**ಪಿ ಡಬ್ಲ್ಯೂ: 1**

**ದಿಃ 20.01.2020 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಡಿ.ವಿ.ಎ. ವಕೀಲರಿಂದಃ**

1. ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಅಂಶವನ್ನು ನಾನೇ ಹೇಳಿ ಬರೆಸಿ ಸಹಿ ಹಾಕಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

2. ನಾನು ವಂಶವೃಕ್ಷ ದೃಡೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-01 ಎಂದು ಗುರುತಿಸಲಾಯಿತು. ನನ್ನ ಅಜ್ಜಿ ವಾಸಮ್ಮ ಇವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-02 ಎಂದು ಗುರುತಿಸಲಾಯಿತು. ಎರಡು ಪುರಸಭೆ, ಹೊಸದುರ್ಗರವರು ನೀಡಿದ ಆಸ್ತಿ ತೆರಿಗೆ ರಿಜಿಸ್ಟರ್ ದೃಡೀಕೃತ ನಕಲಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಪಿ-03 ಮತ್ತು 04 ಎಂದು ಗುರುತಿಸಲಾಯಿತು. ಪುರಸಭೆ, ಹೊಸದುರ್ಗರವರು ನೀಡಿದ ಆಸ್ತಿ ತೆರಿಗೆ ನಿರ್ಧರಣಾ ರಿಜಿಸ್ಟರ್ ನ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-05 ಎಂದು ಗುರುತಿಸಲಾಯಿತು. ದಿಃ 31.08.2009 ರ ದಾನಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-06 ಎಂದು ಗುರುತಿಸಲಾಯಿತು. ದಿಃ 18.01.2018 ರಂದು ಪ್ರತಿವಾದಿ 01 ರವರಿಗೆ ನೀಡಿದ ನೋಟೀಸ್ಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-07 ಎಂದು ಗುರುತಿಸಲಾಯಿತು. ದಿಃ 19.01.2018 ರ ಅಂಚೆ ರಶೀದಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-08 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿಗೆ ನೀಡಿದ ನೋಟೀಸ್ಸಿನ ಅಂಚೆ ಲಕೋಟೆಯು ಮರಳಿ ಬಂದಿರುವುದನ್ನು ಹಾಜರುಪಡಿಸಿರುತ್ತೇನೆ. ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ, ಅದರಲ್ಲಿ ದಿಃ 18.01.2018 ರ ನೋಟೀಸ್ ಇರುತ್ತದೆ. ಸದರಿ ನೋಟೀಸ್ ನ್ನು ನಿಪಿ-9 ಎಂದು, ಲಕೋಟೆಯನ್ನು ನಿಪಿ-09(ಎ) ಎಂದು ಗುರುತಿಸಲಾಯಿತು. ನನ್ನ ತಂದೆ ಎಸ್.ಎನ್. ನಾಗರಾಜ ಶೆಟ್ಟಿ ಇವರ ಮರಣ ಪ್ರಮಾಣ

ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ದಿಃ 30.07.2009 ರ ಪಾಲು ವಿಭಾಗ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ದಾವೆಯಲ್ಲಿ ಕೇಳಿಕೊಂಡಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** 1 ನೇ ಪ್ರತಿವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ